ದಿನಾಂಕ: 04.04.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಟಿ ಎಸ್ ಜಿ ವಕೀಲರಿಂದಃ**

ನರಸಿಂಹಪ್ಪನವರು ನನಗೆ ಸಂಬಂಧದಲ್ಲಿ ಅಣ್ಣ ತಮ್ಮಂದಿರಾಗಬೇಕು. ಎ ವಿ ಕೊಟ್ಟಿಗೆಯಲ್ಲಿ ನಾನು ಹುಟ್ಟಿ ಬೆಳೆದಿರುತ್ತೇನೆ . ನರಸಿಂಹಪ್ಪನವರ ಮನೆಯ ಹಿಂಬದಿಯಲ್ಲಿ ನಮ್ಮ ಮನೆ ಇದೆ ಎಂದರೆ ನಿಜ. 7-8 ವರ್ಷಗಳ ಹಿಂದೆ ನರಸಿಂಹಪ್ಪನವರು ವಿಲ್ ಮಾಡುತ್ತೇನೆ ಎಂದು ಹೇಳಿ ನಮ್ಮನ್ನು ಕರೆಸಿಕೊಂಡು ತಾಲೂಕು ಕಛೇರಿ ಬಳಿ ಸಹಿ ಮಾಡಿಸಿಕೊಂಡಿರುತ್ತಾರೆ. 27.08.2018 ರ ಒಂದು ವಾರದ ಮೊದಲು ನರಸಿಂಹಪ್ಪನವರು ನನ್ನನ್ನು ಕರೆದಿರುತ್ತಾರೆ. ನಾನು ಹಿರಿಯೂರಿಗೆ ಬರುವಾಗ ಸುಮಾರು ಒಂದು ಗಂಟೆಯಾಗಿರಬಹುದು. ನರಸಿಂಹಪ್ಪ ಬಂದ ನಂತರ ನಾನು ಬಂದಿರುತ್ತೇನೆ. ನರಸಿಂಹಪ್ಪನವರು ಒಬ್ಬರೇ ಬರುವಹಾಗೆ ಆರೋಗ್ಯವಾಗಿದ್ದರು. ಲಿಂಗರಾಜು ಸಹ ಬಂದಿದ್ದರು. ನರಸಿಂಹಪ್ಪನವರು ಪಹಣಿ , ಆಧಾರ್ ಕಾರ್ಡ್ ಗಳನ್ನು ಕೊಟ್ಟಿರುತ್ತಾರೆ. ನರಸಿಂಹಪ್ಪನವರು ನಾವು ಬರುವು ಪೂರ್ವದಲ್ಲಿಯೇ ವಿಲ್ ಬರೆದಿದ್ದರು. ತಾಲೂಕು ಕಛೇರಿ ಬಳಿ ನಾವು ವಿಲ್ ನಾಮೆ ಬರೆದ ನಂತರ ಸಹಿ ಮಾಡಿರುತ್ತೇವೆ. ನಾನು ಒಂದೇ ಸಹಿ ಮಾಡಿರುತ್ತೇನೆ. ನರಸಿಂಹಪ್ಪನವರು 7 ಪುಟ್ಟಕ್ಕೂ ಸಹಿ ಮಾಡಿರುತ್ತಾರೆ.

ದಾವಾಸ್ತಿಗಳನ್ನು ನರಸಿಂಹಪ್ಪನವರು ಖರೀದಿ ಮಾಡಿದ ಆಸ್ತಿಗಳಾಗಿರುತ್ತವೆ. ಸಹಿ ಮಾಡುವಾಗ ವಿಲ್ ನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಓದಿರುವುದಿಲ್ಲ ಆದರೆ ಸಹಿ ಮಾಡಿರುತ್ತೇನೆ. ನನ್ನ ತಂದೆ ಮತ್ತು ನರಸಿಂಹಪ್ಪನವರು ಸ್ವಂತ ಅಣ್ಣತಮ್ಮಂದಿರು ಎಂದರೆ ನಿಜ. ನನ್ನ ತಂದೆ ಮತ್ತು ನರಸಿಂಹಪ್ಪನವರು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ನರಸಿಂಹಪ್ಪನವರು ಯಾವಾಗ ಆಸ್ತಿ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಕೊರ್ಟ್ ನಲ್ಲಿ ಕಿಮ್ಮತ್ತು ಕಟ್ಟಿ ಖರೀದಿ ಮಾಡಿರುತ್ತಾರೆ. 4 ಸರ್ವೆ ನಂಬರ್ ಗಳು ಇರುತ್ತವೆ. ನ್ಯಾಯಾಲಯದ ತೀರ್ಮಾನವಾಗಿ 4 ಸರ್ವೆ ನಂಬರ್ ಗಳ ಜಮೀನನ್ನು ಖರೀದಿ ಮಾಡಿರುತ್ತಾರೆ.

ಸರ್ವೆ ನಂ.11/1 ರಲ್ಲಿ ಎಷ್ಟು ಎಕರೆ ನರಸಿಂಹಪ್ಪನವರು ವಿಲ್ ಮಾಡಿದ್ದಾರೆ ಎಂದು ಗೊತ್ತಿಲ್ಲ . 4-5 ಸರ್ವೆ ನಂಬರ್ ಗೆ ವಿಲ್ ಮಾಡಿರುತ್ತಾರೆ. ನರಸಿಂಹಪ್ಪನವರನ್ನು ಪ್ರಕಾಶ ಮತ್ತು ಅವರ ಕುಟುಂಬದವರು ನೋಡಿಕೊಳ್ಳುತ್ತಿದ್ದರು. ಪ್ರಕಾಶ್ ರವರು ನರಸಿಂಹಪ್ಪನ ಮೇಲೆ ವಿಭಾಗ ಕೇಳಿ ದಾವೆ ಸಲ್ಲಿಸಿದ ವಿಚಾರ ಗೊತ್ತಿರುವುದಿಲ್ಲ. ಸೌಜನ್ಯ ರವರು 2014 ರಿಂದ ಈ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ ವಿಚಾರ ನನಗೆ ಗೊತ್ತಿರುತ್ತದೆ. ಕೇಸ್ ಚಾಲ್ತಿಯಲ್ಲಿರುವಾಗಲೇ ನರಸಿಂಹಪ್ಪನವರು ವಿಲ್ ಬರೆದಿದ್ದಾರೆ ಎಂದರೆ ನಿಜ. ನಾನು ನರಸಿಂಹಪ್ಪನ ಸ್ವಂತ ಅಣ್ಣನ ಮಗನಾಗಿದ್ದರಿಂದ ಪ್ರಕಾಶ್ ಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು